**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**
**ಸಿ.ಸಿ. 1011/2024**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ** 7
**ದಿನಾಂಕಃ** 10.06.2026 **ಸಿಡಬ್ಲ್ಯೂ** 12

| | |
|---|---|
| ಹೆಸರು | ಶ್ರೀಮತಿ ಭಾಗ್ಯಮ್ಮ |
| ಗಂಡನ ಹೆಸರು | ಮಂಜಪ್ಪ |
| ವಯಸ್ಸು | 38 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಜರೀಕಟ್ಟೆ ಗ್ರಾಮ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 2 ವರ್ಷಗಳ ಹಿಂದೆ ನಾನು ಆಟೋದಲ್ಲಿ ಸಾಕಮ್ಮ, ಬಸಮ್ಮ, ರೇಣುಕಮ್ಮ , ಹನುಮಕ್ಕ , ನರಸಪ್ಪ , ಕೆಂಚಮ್ಮ, ಲಕ್ಷ್ಮಮ್ಮ ಸೇರಿಕೊಂಡು ಜರೀಕಟ್ಟೆ ಗ್ರಾಮದಿಂದ ದಾವಣಗೆರೆಗೆ ಶವಸಂಸ್ಕಾರಕ್ಕಾಗಿ ಹೋಗಿ ಶವ ಸಂಸ್ಕಾರ ಮುಗಿಸಿಕೊಂಡು ದಾವಣಗೆರೆಯಿಂದ ಜರೀಕಟ್ಟೆ ಗ್ರಾಮಕ್ಕೆ ಬರುತ್ತಿರುವಾಗ ಮಿಲ್ಲಕಟ್ಟೆ ಗ್ರಾಮದ ಒಂದು ದೇವಸ್ಥಾನದ ಹತ್ತಿರ ಒಂದು ಅಪಘಾತವಾಗಿರುತ್ತದೆ. ಆ ಅಪಘಾತದಲ್ಲಿ ನನ್ನ ಅಕ್ಕ ಲಕ್ಷ್ಮಮ್ಮ ಮರಣ ಹೊಂದಿರುತ್ತಾರೆ. ನನಗೆ ಸೊಂಟಕ್ಕೆ ಗಾಯವಾಗಿರುತ್ತದೆ. ಬೇರೆಯವರಿಗೆ ಕೈಗೆ, ತುಟಿಗೆ, ತಲೆಗೆ, ಎದೆಗೆ ಪೆಟ್ಟಾಗಿರುತ್ತದೆ. ನಂತರ ನಾವು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ಆಟೋ ಚಾಲಕನ ಹೆಸರು ಗೊತ್ತಿರುವುದಿಲ್ಲ. ನಾನು ಆಟೋ ಚಾಲಕನನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಎಪಿಪಿ ಯವರು ಕೋರಿದ್ದು, ಸಂಗತಿಗಳನ್ನು ಪರಿಶೀಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಸಸಅ ರವರಿಂದಃ**

ದಿಃ04.02.2024 ರಂದು ನಮ್ಮೂರಿನ ಕೆಂಚಪ್ಪ ಬಿನ್ ಹನುಮಂತಪ್ಪ ಆಟೋ ಸಂ. ಕೆಎ-17 ಡಿ-3104 ನೇದರಲ್ಲಿ ನನ್ನ ಸಂಬಂಧಿ ಗಣೇಶರವರ ಶವ ಸಂಸ್ಕಾರಕ್ಕಾಗಿ ನಾನು ದಾವಣಗರೆಗೆ ಹೋಗಿರುತ್ತೇನೆ ಎಂದರೆ ಸರಿ. ಆಟೋ ಚಾಲಕ ಕೆಂಚಪ್ಪ ಆಟೋವನ್ನು ದಾವಣಗೆರೆ ಮಲೆಬೆನ್ನೂರು ರಸ್ತೆಯಲ್ಲಿ ಶಾಮನೂರು ಮಾರ್ಗವಾಗಿ ಜರೀಕಟ್ಟೆ ಗ್ರಾಮದ ಕಡೆಗೆ ಆಟೋವನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬರುತ್ತಿರುವಾಗ ಸಂಜೆ 4 ಗಂಟೆ ಸುಮಾರಿಗೆ ಮಿಲ್ಲಕಟ್ಟೆ ಗ್ರಾಮದ ಸಾಯಿಬಾಬಾ ದೇವಸ್ಥಾನದ ಮುಂದೆ ರಸ್ತೆಯಲ್ಲಿ ನಾಯಿಯೊಂದು ಅಡ್ಡ ಬಂದಿರುವುದರಿಂದ

ಆಟೋ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿ ರಸ್ತೆಗೆ ಬಿದ್ದಿರುತ್ತದೆ ಎಂದರೆ ಸರಿ. ನಮಗೆ ಸದರಿ ಅಪಘಾತದಿಂದ ಸಣ್ಣ ಪುಟ್ಟ ಗಾಯಗಳಾಗಿದ್ದು ಲಕ್ಷ್ಮಮ್ಮನಿಗೆ ಭಾರಿ ಸ್ವರೂಪದ ಗಾಯಗಳಾಗಿ ಅವಳನ್ನು ಆನಂತರ ಆಸ್ಪತ್ರೆಗೆ ಸಾಗಿಸಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಗದೇ ಮೃತ ಪಟ್ಟಿರುತ್ತಾಳೆ ಎಂದರೆ ಸರಿ. ಈ ಕುರಿತು ಸಾಕಮ್ಮ ಠಾಣೆಗೆ ಹೋಗಿ ದೂರು ನೀಡಿರುತ್ತಾಳೆ ಎಂದರೆ ಸರಿ. ನಾನು ಈ ಕುರಿತು ಪೋಲೀಸರ ಮುಂದೆ ದಿಃ06.02.2024 ರಂದು ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ವ್ಯಕ್ತಿಯೇ ಆ ದಿನ ಆಟೋ ಚಾಲನೆ ಮಾಡುತ್ತಿದ್ದನು. ಅಪಘಾತವು ಆ ವ್ಯಕ್ತಿಯ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿ.

**ಪಾಟೀಸವಾಲು ಮಾಡಲು ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ